ಇಂಡಸ್ಟ್ರಿಯಲ್ ಮಿನಿಸ್ಟರ್ ಆಗಿ ಇಲಾಖೆಯಲ್ಲಿ ಇದ್ದಿರಬಹುದು. ನೀವು ಇದೇ ಇಲಾಖೆಯನ್ನು ವಹಿಸಿಕೊಂಡಿದ್ದೀರಿ. ಅದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ. ಅದಕ್ಕಾಗಿ ಸುಮ್ಮನೆ ಬೇರೆಯವರ ಮೇಲೆ ಜವಾಬ್ದಾರಿ ಹಬ್ಬಿ ನೀವು ಅಲ್ಲಿನ ಜನರಿಗೆ ತಪ್ಪು ದಾರಿಗೆ ಅಥವಾ ಮೋಸ ಮಾಡತಕ್ಕದ್ದು ಮಾಡಬಾರದು ಎನ್ನತಕ್ಕ ಮಾತನ್ನುಹೇಳಿ ಪುನಃ ತಮ್ಮನ್ನು ಕೇಳಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ಬಹಳ ಜನ ಸ್ನೇಹಿತರು ಮಾತನಾಡುವವರು ಇದ್ದಾರೆ. ಡಾ। ಮಲಕ ರೆಡ್ಡಿಯವರು, ಜೆ.ಟಿ. ಪಾಟೀಲರ್ ಅವರು, ಕುನ್ನೂರ್ ಅವರು ಎಲ್ಲಾ ಮಾತನಾಡುವವರು ಇದ್ದೀರಿ. ಈಗ ಸಭೆಯನ್ನು ಒಂದು ಗಂಟೆಗೆ ಮುಂದಕ್ಕೆ ಹಾಕಿ ಮತ್ತೆ ನಾವು ಮೂರೂವರೆ ಗಂಟೆಗೆ ಚರ್ಚೆ ಮುಂದುವರಿಸಬಹುದು, ಈಗ ಸಭೆಯನ್ನು ಒಂದು ಗಂಟೆ ಮುಂದಕ್ಕೆ ಹಾಕುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 3.30 ಅಂದರೆ ಮೂರುವರೆಗೆ ಸೇರಬೆಕು.

ಛೇರ್ಮನ್:- ಸದಸ್ಯರು ಬಂದರೇ 3.30ಕ್ಕೆ ಸೇರೋಣ.

(ಸಭೆಯು 2.28ಕ್ಕೆ ಮುಕ್ತಾಯವಾಗಿ ಮತ್ತೆ 3.30ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಸಂಜೆ 4 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು:- ಮಲ್ಲಿಕಾರ್ಜುನ ಖರ್ಗೆಯವರೆ ಮೊದಲು ವಿಧೇಯಕಗಳನ್ನು ತೆಗೆದುಕೊಳ್ಳೋಣ, ಆಷ್ಟು ಹೊತ್ತಿಗೆ ಮುಖ್ಯ ಮಂತ್ರಿಗಳು ಬರುತ್ತಾರೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕ, 1996

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ(ಬಂದರು ಮತ್ತು ಮೀನುಗಾರಿಕೆ ಇಲಾಖೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ(ಬಂದರು ಮತ್ತು ಮೀನುಗಾರಿಕೆ ಇಲಾಖೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಈವರೆಗೆ ಜಾರಿಯಲ್ಲಿರುವ ಅಧಿನಿಯಮಗಳು ಬೇರೆ ಬೇರೆ ಭಾಗಕ್ಕೆ ಬೇರೆ ಬೇರೆ ಇತ್ತು. ಭಾರತೀಯ ಮೀನುಗಾರಿಕಾ ಅಧಿನಿಯಮ 1897, ಮೀನುಗಾರಿಕಾ ಮದ್ರಾಸ್ ತಿದ್ದುಪಡಿ 1927, ಹೈದರಾಬಾದ್ ಮೀನುಗಾರಿಕಾ ಅಧಿನಿಯಮ 1956, ಹಾಗೂ ಮೈಸೂರು ಬೇಟೆ ಮತ್ತು ಮೀನುಗಾರಿಕಾ ಸಂರಕ್ಷಣಾ ಅಧಿನಿಯಮ 1901, ಇದೆಲ್ಲವನ್ನು ಸಮೀಕರಿಸಿ ಸಮಗ್ರವಾಗಿ ಒಂದೇ ಶಾಸನವನ್ನು ಮಾಡಬೇಕೆಂದು ಈಗ ಒಂದು ವಿಧೇಯಕವನ್ನು ತಂದಿದ್ದೇವೆ. ಇದರಲ್ಲಿ ಪರವಾನಿಗೆಯನ್ನು ಪಡೆದು ಮೀನುಗಾರಿಕೆಯನ್ನು ಮಾಡುವಂತಹದ್ದು, ಈಗ ನಾಶವಾಗುವಂತಹ ತಳಿಗಳನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಹಾಗೂ ಪರವಾನಿಗೆ ಪಡೆದು ಮೀನು ಮರಿಗಳನ್ನು ಉತ್ಪಾದನೆ ಮಾಡುವಂತಹದ್ದು ಇಂತಹ ಅನೇಕ ನಿಯಮಗಳನ್ನು ತಂದಿದ್ದೇವೆ. ಆಮೇಲೆ ಇದುವರೆಗೆ

ಇದ್ದಂತದ್ದು ಕೇವಲ ಎಂಟು ಜಿಲ್ಲೆಗಳಿಗೆ ಮಾತ್ರ ಇದು ಸೀಮಿತವಾಗಿತ್ತು, ಅದನ್ನು ಇಡೀ ರಾಜ್ಯದ ವ್ಯಾಪ್ತಿಗೆ ತರಬೇಕೆಂದು ಈ ಒಂದು ವಿಧೇಯಕವನ್ನು ತಂದಿದ್ದೇವೆ; ಇವೆಲ್ಲಾ ಈ ವಿಧೇಯಕದ ಮುಖ್ಯ ಲಕ್ಷಣಗಳಾಗಿದ್ದಾವೆ. ಮಾನ್ಯ ಸಭೆ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ವೈ ರಾಮಕೃಷ್ಣ:- (ಆನೆಕಲ್) ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿಗೆ ಮೊದಲು ರಾಜ್ಯಪಾಲರ ಒಪ್ಪಿಗೆ ಯನ್ನು ತೆಗೆದುಕೊಳ್ಳಬೇಕಾಗಿತ್ತು ಏಕೆಂದರೆ ಇದರಲ್ಲಿ ಹಣಕಾಸು ವಿಚಾರವೂ ಸೇರಿದೆ ತಾವು ದಯವಿಟ್ಟು ಕ್ಲಾಸ್-8ನ್ನು ನೋಡಿ ಕ್ಲಾಸ್-8ರಲ್ಲಿ ನೀವು ಏನು ಹೇಳುತ್ತೀರಿ, ನೀವು ಒಂದು ಬೋರ್ಡ್ ಮಾಡುತ್ತೀರಿ, ಆ ಬೋರ್ಡಿನ ಸದಸ್ಯರುಗಳಿಗೆ ನಾವು ಭತ್ಯೆ ಕೊಡಬೇಕಾಗುತ್ತದೆ, ಟಿ ಎ ಕೊಡಬೇಕಾಗುತ್ತದೆ, 11 ಜನರ ಕಮಿಟಿ ಇಡಬೇಕಾಗುತ್ತದೆ, ಅವರಿಗೆಲ್ಲಾ ಸಂಭಾವನೆ ಕೊಡಬೇಕಾಗುತ್ತದೆ ತಾವು ಒಂದು ಕಮಿಟಿ ಮಾಡಿದ್ದೀರಿ, ನಾಳೆ ದಿವಸ ಅದಕೊಬ್ಬರು ಛೇರ್‌ಮೆನ್ ಮಾಡಬೇಕಲ್ಲ ನಾನ್ ಎಕ್ಸ್‌ಛೇಂಜ್ ಛೇರ್‌ಮನ್ ಮಾಡಬಹುದು ಅವರಿಗೆ ನೀವು ಸಂಬಳ ಇತ್ಯಾದಿಗಳನ್ನು ಮೀಟ್ ಮಾಡಬೇಕಾದರೆ ಹಣ ಒದಗಿಸಬೇಕಲ್ಲ

ಶ್ರೀ ಆರ್ ಎಲ್ ಜಾಲಪ್ಪ: ಮಿನಿಸ್ಟರೆರವರೇ ಛೇರ್‌ಮೆನ್ ಆಗಿರುತ್ತಾರೆ

ಶ್ರೀ ವೈ ರಾಮಕೃಷ್ಣ: ಇದರಲ್ಲಿ ನೀವು ಸಮಿತಿಗೆ ಹಣ ಒದಗಿಸಬೇಕು ಹಣವನ್ನು ನೀವು ಯಾವಾಗ ಒದಗಿಸಬೇಕಾಗುತ್ತದೆ ಆಗ ಇದು ನನ್ನ ಮೊದಲನೇ ಅಬ್ಜಕ್ಷನ್ ಎರಡನೇ ಅಬ್ಜಕ್ಷನ್ ಎಂದರೆ, ಮಾನ್ಯ ಮಂತ್ರಿಗಳು ಹೇಳಿದರು ಇದು ನಾಲ್ಕು ಕಡೆ ನಾಲ್ಕು ವಿಧದಲ್ಲಿ ಇದೆ ಒಂದು ಮೊದಲನೆಯದು, ಸೆಂಟ್ರಲ್ ಆಕ್ಟ್ ಜಾರಿಯಲ್ಲಿರುವಾಗ ನಾವು ಅದನ್ನು ಬಿಟ್ಟು ಸ್ಟೇಟ್ ಆಕ್ಟ್ ಮಾಡುವುದಕ್ಕೆ ನಮಗೆ ಅಧಿಕಾರ ಇದೆಯೇ?

ಅದಕ್ಕೇನಾದರೂ ಇವರು ಕೇಂದ್ರ ಸರ್ಕಾರದಿಂದ ಅನುಮತಿಯನ್ನು ತೆಗೆದುಕೊಂಡಿದ್ದಾರೆಯೇ? ಎಗ್ಸೆಂಪ್‌ಷನ್ ತೆಗೆದುಕೊಂಡಿದ್ದಾರೆಯೇ ಇನ್ನು ಉಳಿದಂಥ ಮೂರು ಆಕ್ಟ್‌ಗಳು, ಯಾವುವೆಂದರೆ, ಈ ಮೂರಕ್ಕೂ ಇವರು ಕ್ರೋಢೀಕರಿಸಬಹುದು ಮತ್ತು ಬಿಲ್ ತರತಕ್ಕಂಥ ಅಧಿಕಾರ ಇದೆ ಆದರೆ ಮೊದಲನೇ ಬಿಲ್ ತರುವುದಕ್ಕೆ ಇವರಿಗೆ ಅಧಿಕಾರವಿದೆಯೇ? ಕಾಂಪಿಟೆನ್ಸಿಯನ್ನು ಪ್ರಶ್ನೆ ಮಾಡಬೇಕಾಗುತ್ತದೆ ಅಥವಾ ಒಂದು ವೇಳೆ ಅವರು ಅನುಮತಿಯನ್ನು ತೆಗೆದುಕೊಂಡಿದ್ದು ಅದನ್ನು ತೋರಿಸಿದಂಥ ನನ್ನದೇನೂ ಅಭ್ಯಂತರವಿರುವುದಿಲ್ಲ ಇವೆರಡರ ವೆಲೆಡಿಟಿ ಬಗ್ಗೆ ನಾನು ತಮ್ಮ ಮುಂದೆ ಇಡುತ್ತಿದ್ದೇನೆ ಮೂಲ ಉದ್ದೇಶವನ್ನು ಅವರು ಹೇಳಿದ ಮೂಲ ಉದ್ದೇಶವನ್ನು ಹೇಳುವಾಗ ಒಳನಾಡು ಮೀನಿನ ಅಭಿವೃದ್ಧಿ, ತಳಿಗಳ ಸಂರಕ್ಷಣೆ ಮತ್ತು ಮೂರು ತಿಂಗಳು ಅಂದರೆ ಸೆಪ್ಟೆಂಬರ್‌ನಿಂದ ಡಿಸೆಂಬರ್‌ತನಕ ಅದರ ಕಾವಲು ಆ ಸಂದರ್ಭದಲ್ಲಿ ಯಾರಾದರೂ ಹಿಡಿದರೆ ಅವರಿಗೆ ವಿಧಿಸಬಹುದಾದಂಥ ದಂಡ ಇವುಗಳನ್ನು ಮಾತ್ರ ಇದರಲ್ಲಿ ತಿಳಿಸಿದ್ದಾರೆ ಇದರಲ್ಲಿರತಕ್ಕಂಥ 24 ಸೆಕ್ಷೆನ್‌ಗಳಲ್ಲಿ ಸುಮಾರು ಶೇಕಡಾ 50ರಷ್ಟು ಸೆಕ್ಷೆನ್‌ಗಳು ಬರೀ ಶಿಕ್ಷೆಗೇ ಸಂಬಂಧಪಟ್ಟಿದ್ದೇ ಆಗಿದ್ದು, ಇದರಲ್ಲಿ ಅಭಿವೃದ್ಧಿಗೆ ಸಂಬಂಧಪಟ್ಟಿದ್ದು ಏನೂ ಇಲ್ಲ, ಇದರಲ್ಲಿ ನೀವು ಹೇಳಿರತಕ್ಕಂಥಾದ್ದು ಬರೀ ದಂಡ, ಲೆಸೆನ್ಸ್, ರಿಜಿಸ್ಟ್ರೇಷನ್, ಅಫೆನ್ಸ್, ಸ್ಟಾಗ್‌ನೇಸಬಲ್ ಅಫೆನ್ಸ್, ಕಾಂಪೌಂಡಬಲ್ ಇಷ್ಟು ಇದೆಯೇ ಹೊರತು, ಇದರಿಂದ ಈ ಕೆಲಸ ಸಾಧ್ಯವಾಗುವುದಿಲ್ಲ ನೀವು ಈ ಬಿಲ್ಲನ್ನು ತೆಗೆದುಕೊಂಡು ಬಂದಿದ್ದೀರಿ ಕಾಗ್‌ನೆಸಬಲ್ ಅಫೆನ್ಸ್ ಯಾರದು ಸ್ವಾಮಿ? ಅವಿದ್ಯಾವಂತ,

ಹೊಟ್ಟೆಪಾಡನ್ನು ಹೊರೆದುಕೊಳ್ಳುವುದಕ್ಕೆ ಮಣ್ಣು ಹೊರುವ ಬದಲು, ಮೀನು ಹಿಡಿದು ಮಾರಲು ಹೋಗುತ್ತಾನೆ ನೀವು ಅವನನ್ನು ಪೋಲೀಸಿನವರು ಕೈಯಲ್ಲಿ ಕೊಟ್ಟು, ಅವನು ದಂಡ ಕೊಡುವುದಕ್ಕೆ ಅವನ ಹತ್ತಿರ ದುಡ್ಡು ಎಲ್ಲಿ ಇರುತ್ತದೆ ಅವನು ಮೀನು ಮಾರಿಕೊಂಡು ಹೋಗಿ ಎಂದು ಹೇಳುತ್ತಾನೆ ಇದಕ್ಕೆ ಪೋಲೀಸಿನವರು ಒಪ್ಪುತ್ತಾರಾ ಸ್ವಾಮಿ? ಕಾನೂನು ತರುತ್ತೀರಿ, ಅವನಿಗೆ ದಂಡ ಹಾಕುತ್ತೀರಿ.

ಅಧ್ಯಕ್ಷರು: ಬರ್‌ಗ್ಲರಿ ಕಾಗ್‌ನೆಸಿಬಲ್ ಅಫೆನ್ಸೇ?

ಶ್ರೀ ವೈ ರಾಮಕೃಷ್ಣ ಹೌದು ಸ್ವಾಮಿ

ಶ್ರೀ ವೈ ರಾಮಕೃಷ್ಣ:- ನಾನು ಹೇಳುವುದು ವಿದ್ಯಾವಂತರು ಯಾರಾದರೂ ಹೋಗುತ್ತಾರೋ ನೀವು ಮಾಡುತ್ತಿರತಕ್ಕಂಥ ಗವರ್ನಮೆಂಟ್ ಪಾಂಡ್ಸ್ ಇರಬಹುದು ಅಥವಾ ನೀವು ಇಟ್ಟರತಕ್ಕಂಥ ನೀರಾವರಿ ಆಣೆಕಟ್ಟುಗಳು ಇಲ್ಲದೇ ಇರತಕ್ಕಂಥ ಜಾಗದಲ್ಲಿ ಇರಬಹುದು ಅಲ್ಲೇನಾದರೂ ಮಾಡಿದರೆ ನೀವು ಹಾಕಿ ಅದು ಬಿಟ್ಟು ಬಿಟ್ಟು ಯಾರೋ ಒಬ್ಬನು ಮೀನು ಹಿಡಿದುಕೊಂಡು ಸಾಕಿಕೊಂಡಿರುತ್ತಾನೆ ಅವನನ್ನು ನೀವು ಹಿಡಿದುಕೊಂಡುಬಿಟ್ಟರೆ ಅದು ಹೇಗಾಗುತ್ತದೆ.

ಈಗ ನೀವು ಇನ್‌ಲ್ಯಾಂಡ್ ಫಿಷರೀಸ್ ಎಲ್ಲಿ ಬೆಳೆಸಿದ್ದೀರಿ? ಅದೂ ಕುಡಿಯುವುದಕ್ಕೆ ನೀರು ಇಲ್ಲದೇ ಇರುವ ಈ ಸಂಧರ್ಭದಲ್ಲಿ ಫಿಷರೀಸ್ ಆ್ಯಕ್ಟ್‌ನ್ನು ತಂದಿದ್ದೀರಿ ಕನ್ನಂಬಾಡಿ ಕಟ್ಟೆಯ ಕೆಳಗೋ ಅಥವಾ ತುಂಗಭದ್ರಾ ಡ್ಯಾಂ ಕೆಳಗೋ ಇಂಥ ಕಣಿವೆಗಳ ಕೆಳಗೆ ಕಟ್ಟರತಕ್ಕಂಥಾವುಗಳಿಗೆ ಈ ಆ್ಯಕ್ಟ್ ಅನ್ವಯಿಸುತ್ತದೆ ಎಂದರೆ ನಾನು ಅದನ್ನು ಒಪ್ಪುತ್ತೇನೆ ಇದನ್ನು ಬಿಟ್ಟು ಬಿಟ್ಟು ಇದು ಒಳನಾಡಿನ ಮೀನು ಎಲ್ಲಕ್ಕೂ ಅನ್ವಯಿಸುತ್ತದೆ. ಯಾರಾದರೂ ಲೈಸೆನ್ಸ್ ಇಲ್ಲದೆ ಮೀನು ಹಿಡಿದುಕೊಂಡು ಬಂದರೆ ಅಥವಾ ರಿಜಿಸ್ಟ್ರೇಷನ್ ಇಲ್ಲದೇ ಹಿಡಿದುಕೊಂಡು ಬಂದರೆ ಅವರನ್ನು ಹಿಡಿಯುತ್ತೀರಿ, ಅದೂ ನಾನ್‌ಬೇಲಬಲ್. ಇದು ಹೇಗೆ ಆಗುತ್ತದೆ. ಅವನನ್ನು ನೀವು ಜೈಲಿಗೆ ಹಾಕಬೇಕೇ? ಅವನನ್ನು ಪೋಲಿಸ್ ಸ್ಟೇಷನ್‌ನಲ್ಲಿ ಕೂಡಿಸಿಕೊಳ್ಳಬೇಕು ಎಂದರೆ ಇದೇನು ತಮಾಷೆಯೇ? ಜೊತೆಗೆ ಕಾಂಪೌಂಡಬಲ್ ಎಂದು ಬೇರೆ ಮಾಡಿದ್ದೀರಿ. ಕಾಂಪೌಂಡನಲ್ ಯಾವಾಗ ಆಗುತ್ತದೆ ಎಂದರೆ ಅವನು ಲಂಚ ಕೊಟ್ಟಾಗ, ಕಾಂಪೌಂಡಬಲ್ ಆಗುತ್ತದೆ. ಇರತಕ್ಕಂಥ ವಾಸ್ತವ ವಿಚಾರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಕಾಂಪೌಂಡಬಲ್ ನೀವು ಏತಕ್ಕೋಸ್ಕರ ಮಾಡಿದ್ದೀರಿ? ಅವನೇನಾದರೂ ಜೇಬಿನಿಂದ ಕೊಟ್ಟರೆ, ಮೀನು ಕೊಟ್ಟರೆ ಪರವಾಗಿಲ್ಲ. ಅವನು ಒಂದು ಸಾವಿರವೋ, ಎರಡು ಸಾವಿರವೋ ಕೊಡುವುದು, ಅದು ಸರಿಯಲ್ಲ, ನೀವು ಜೈಲಿಗೆ ಹೋಗು ಎಂದರೆ ಅವನು ಏನು ಮಾಡಬೇಕು? ಸಿಂತಟೈಸ್ ಮಾಡಿ ಈಗಾಗಲೇ ಇರುವಂತೆ ಲೈಸೆನ್ಸ್ ತೆಗೆದುಕೊಂಡರೇ ಅವನು ಮಾರುವುದಕ್ಕೆ ಸಾಧ್ಯ. ಲೈಸೆನ್ಸ್ ಇಲ್ಲ ಎಂದು ಅರ್ಥವಲ್ಲ. ಈಗಿರತಕ್ಕಂಥ ಕಾನೂನು ಪ್ರಕಾರವೂ ಲೆಸೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿ ಲೈಸೆನ್ಸ್ ತೆಗೆದುಕೊಳ್ಳುವ ಅವಕಾಶ ಇರುವಾಗ, ನೀವು ಈ ಒಂದು ಕ್ರೂರವಾದಂಥ ಕಾನೂನನ್ನು ಅವಿದ್ಯಾವಂತನ ಮೇಲೆ , ಬಡವನ ಮೇಲೆ, ಸಮಾಜದಲ್ಲಿ ಇನ್ನೂ ಅವನು ಎಚ್ಚೆತ್ತಿಲ್ಲ, ಆ ಮನುಷ್ಯ ನ ಮೇಲೆ ನೀವು ಪ್ರಯೋಗ ಮಾಡಿ, ಪೋಲೀಸಿನವರ ಸಹವಾಸ ಮಾಡಿಸಿ, ಅವನ ಜೇಬಿನಿಂದ ದುಡ್ಡು ಕೊಡಿಸಿ, ಅವನನ್ನು ಜೈಲಿಗೆ ಕಳುಹಿಸಲು ಈ ಕಾನೂನನ್ನು ತಂದಿದ್ದೀರಲ್ಲ, ಇದು ಯಾವ ನ್ಯಾಯ ಎಂದು ತಮ್ಮನ್ನು ಕೇಳುತ್ತಿದ್ದೇನೆ. ನೀವು ಮೂರು ರಾಜ್ಯಗಳಿಂದ ಸೇರಿಸಿ ಈ ಆ್ಯಕ್ಟ್ ಇದೆ ಎನ್ನುವುದನ್ನು ದಯವಿಟ್ಟು ಓದಿ ಹೇಳಬೇಕು. ಮೂರು ರಾಜ್ಯಗಳದ್ದು ಇವರು

ಹೇಳಿದ್ದಾರೆ. ಮೊದಲನೆಯದು ಸೆಂಟ್ರಲ್ ಆಕ್ಟ್, ಅದನ್ನು ಬಿಟ್ಟು ಬಿಡಿ you have to justify whether this House has competency to pass such a legislation. ಎರಡನೆಯದಾಗಿ, ಯಾವ ಆಕ್ಟನ್ನು ನೀವು ನೋಡಿ, ಮೂರು ಕಡೆ ಅಂದರೆ ಮೂರು ರಾಜ್ಯದಲ್ಲಿರತಕ್ಕಂಥ ಆಕ್ಟ್‌ಗಳಲ್ಲಿ ಒಂದೊಂದು ಸೆಕ್ಷನ್ ಅನ್ನೇನಾದರೂ ಕಿತ್ತು ಈ ಆಕ್ಟ್ ಮಾಡಿದ್ದೀರೋ? ಅಥವಾ ನೀವೇ ಸ್ವತಂತ್ರವಾಗಿ ಯೋಚಿಸಿ, ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಈ ಸಂದರ್ಭದಲ್ಲಿ ಅವನ ಸ್ಥಿತಿಗತಿಗಳನ್ನು ಅರಿತು ಈ ಆಕ್ಟ್ ಮಾಡಿದ್ದೀರೋ? I do not want to unnecessarily... ಆಲೋಚನೆ ಮಾಡಬೇಕಾಗಿತ್ತು. ಇದನ್ನೆಲ್ಲಾ ನಾವು ನೋಡಿದಾಗ, ಇದಕ್ಕೆ ಎಷ್ಟು ಆಲೋಚನೆ ಬೇಕಾಗಿತ್ತೋ, ಅಷ್ಟು ಆಲೋಚನೆ ನೀವು ಮಾಡಿಲ್ಲ, ಮುಖ್ಯವಾಗಿ ಇದಕ್ಕೆ ಒಂದು ಬೋರ್ಡ್ ಮಾಡಬೇಕಾಗಿತ್ತು. ಇದರ ಉದ್ದೇಶ ಏನು ಅಂದರೆ.

ಅಧ್ಯಕ್ಷರು:- ನಿಮಗೆ ಅನುಭವ ಇದೆ.

ಶ್ರೀ ವೈ.ರಾಮಕೃಷ್ಣ:- ಇದನ್ನು ಮಾಡಿರುವುದು ಏಕೆ ಎಂದರೆ, ಮುಖ್ಯವಾಗಿ ಒಂದು ಬೋರ್ಡ್ ಮಾಡಬೇಕು. ಯಾವುದಕ್ಕೆ ಬೋರ್ಡ್ ಮಾಡಬೇಕು ಎಂದರೆ ಇನ್‌ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕು. ಅದಕ್ಕೆ 12-13 ಜನರನ್ನು ಹಾಕಬೇಕು. ಅದಕ್ಕೆ ಒಬ್ಬರನ್ನು ಛೇರಮನ್ ಮಾಡಬೇಕು. ಛೇರ್‌ಮನ್ ಮಾಡಬೇಕು ಎಂದು ಹಾಕಿಲ್ಲ, ಆದರೂ ಮಾಡುತ್ತೀರಿ. ಇದರ ಮಧ್ಯೆ ನಾನು ಬರುವುದಿಲ್ಲ. ಆದರೆ ಇದಕ್ಕೆಲ್ಲಾ ಎಕ್ಸ್‌ಪೆಂಡಿಚರ್ ಆಗಿಯೇ ಆಗುತ್ತದೆಯಲ್ಲ. ಅಂದ ಮೇಲೆ ಹಣಕಾಸಿನ ಹೊರೆ ಬೀಳುವುದಿಲ್ಲ ಎಂದು ಇಲ್ಲಿ ಹಾಕಿದ್ದಾರೆ ನೋಡಿ.

"There is no extra financial implication involved in the proposed measure".

Whether it is correct?

MR. SPEAKER:- You have expressed your apprehension on the bill.....

Sri Y.Ramakrishna:- I am expressing my views. "Sec.18 Cognizance of offence:- No court shall take cognizance of any offence under this Act." ಏನು ಸ್ವಾಮಿ ಇದರ ಉದ್ದೇಶ. ಯಾವ ಆಕ್ಟ್‌ನಲ್ಲಿ ಇರುತ್ತದೆ ಹೇಳಿ. "No court shall take cognizance of any offence under this Act. ಇದು ಹೇಗೆ ಆಗುತ್ತದೆ. So, they are the supreme boss. How can they take away the fundamental rights of the citizens? ಇಂಥ ಪ್ರಾವಿಷನ್ ಹಾಕಬೇಕೇ, ಬೇಡವೇ ಎಂದು ಯೋಚನೆ ಮಾಡುವುದು ಬೇಡವೇ? ಯಾರ ಮೇಲೆ ಇವರು ಉಗ್ರವಾದಂಥ ದಂಡ ಬಿಡುತ್ತಿರುವುದು. ಆ ಆ ಇ ಈ ಬರೆಯುವುದಕ್ಕೂ ಬರುವುದಿಲ್ಲ, ಆ ಮೀನು ಮಾರುವ ಜನಗಳಿಗೆ, ಹರಕಲು ಬಟ್ಟೆ, ಹೊಟ್ಟೆಗೆ ಊಟ ಇರುವುದಿಲ್ಲ. ಅಂಥವನು ಅವನ ಜೀವನಕ್ಕೆ ಬೇಕಾದಂಥ ಎರಡು ರೂಪಾಯಿಯದೋ ಮೂರು ರೂಪಾಯಿಯದೋ ಸಣ್ಣ ಮೀನು ಅಥವಾ ಸೀಗಡಿಯನ್ನು ಹಿಡಿದುಕೊಂಡು ಬಂದರೆ,

ಅವನನ್ನು ನೀನು ಏಕೆ ಹಿಡಿದುಕೊಂಡು ಬಂದೆ ಎಂದು ಜೈಲಿಗೆ ಹಾಕಿದರೆ ಹೇಗೆ? ಅದೂ ಅವನು ಮೀನು ಹಿಡಿಯುವುದು ಎಲ್ಲಿ? ನಿಮ್ಮ ಫಾರಂನಲ್ಲಲ್ಲ; ನಿಮ್ಮ ಫಾರಂನಲ್ಲಾಗಿದ್ದರೆ ಒಪ್ಪಿಕೊಳ್ಳುತ್ತೇನೆ. ಇದು ಆಲೋಚನೆ ಮಾಡಬೇಕಾದಂಥಾದ್ದು.

18(b) "..... unless the prosecution is instituted within three months

from the date on which the offence is alleged to have been

committed"

18(a) ".....except on the complaint or report of the officer

authorised by the State Government in this behalf".

ಇದು ಏನಾಗುತ್ತದೆ ಎಂದರೆ, ರೈತರಿಗೆ, ಬಡವರಿಗೆ ತೊಂದರೆ ಕೊಡತಕ್ಕಂಥ ಒಂದು ಪರಿಸ್ಥಿತಿಯನ್ನು ಉಂಟು ಮಾಡಲು ತಂದಿರತಕ್ಕಂಥ ಮಸೂದೆ ಇದು. ಇದರ ಬಗ್ಗೆ ನಾನು ನಿಮಗೆ ಪ್ರಶ್ನೆ ಮಾಡಬೇಕೆಂದರೆ, ಇವರು ಏನು ಮಾಡಿದ್ದಾರೆ ಎಂದರೆ, ಬೋರ್ಡ್ ಬೇಕಾದರೆ ನೀವು ಬೋರ್ಡ್ ಮಾಡಿಕೊಂಡು ಬಿಡಿ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಅದನ್ನು ಯಾವ ರೀತಿ ಡೆವಲಪ್ ಮಾಡಬೇಕೋ ಅದು ತಮಗೆ ಸೇರಿದ್ದು, ಡೆವಲಪ್ ಮಾಡಿ. ಆದರೆ ನೀವು ಹಾಕಿದ್ದೀರಲ್ಲ 12ನೇ ಸೆಕ್ಷನ್ ಆದಮೇಲೆ, all sections are punitive. Procedure for prosecution, commitment and abatement ಎಲ್ಲಾ ಬರೀ ಇಂಥಾದ್ದೇ ಇದರಲ್ಲಿ ಇರುವುದು. ಇದರಿಂದ ಸಾಮಾನ್ಯವಾಗಿ ನಾವು ಏನು ನಿರೀಕ್ಷೆ ಮಾಡಿದ್ದೆವೋ, ಆ ಮೀನೇನೂ ಇದರಿಂದ ಉದ್ಧಾರವಾಗುವುದಿಲ್ಲ. ಈ ಆಕ್ಟ್‌ನಿಂದ ಒಳನಾಡಿನ ಮೀನು ಯಾವ ರೀತಿ ಉದ್ಧಾರವಾಗುತ್ತದೆ ನನಗಂತೂ ಗೊತ್ತಿಲ್ಲ. ಏಕೆಂದರೆ ಮೊದಲು ಕನ್ಸರ್ವ್ ಮಾಡಬೇಕು ಎಂದು ನೀವು ಏನು ಹೇಳುತ್ತೀರಿ, ಎಲ್ಲಿ ಕನ್ಸರ್ವ್ ಮಾಡುವುದು, we have to develop. How to develop? ಯಾರು ಸ್ವಾಮಿ ಓದಿರುವವರು ಡೆವಲಪ್ ಮಾಡುತ್ತಾರೋ? ನೀವೇನಾದರೂ ಹತ್ತು ಜನರನ್ನು ಪ್ರಾಸಿಕ್ಯೂಟ್ ಮಾಡಿ ಜೈಲಿಗೆ ಕಳುಹಿಸಿಬಿಟ್ಟರೆ ಮೀನು ಮೀನೇ, ಪ್ರೊಫೆಷನ್ ಪ್ರೊಫೆಷನ್ನೇ ಆಗಿ ಹೋಗುತ್ತದೆ. ಮೀನು ಹಿಡಿಯುವುದಕ್ಕೆ ಹೋದರೆ ಜೈಲಿಗೆ ಹಾಕುತ್ತಾರೆ ನಮಗೆ ಏಕೆ ಬೇಕು ಇದು ಎಂದು ಹೇಳುತ್ತಾರೆ. How are you going to conserve, how are you going to develop and how are you going to regulate, in whose favour you are going to develop.

ಶ್ರೀ ವೈ.ರಾಮಕೃಷ್ಣ:- ಆ ಜನಕ್ಕೆ ಈ ಬಿಲ್ ತರುವುದರಿಂದ ಅನುಕೂಲವಾಗುವುದಿಲ್ಲ. ಇದನ್ನು ನೀವು ತೀವ್ರವಾಗಿ ಪರ್ಯಾಲೋಚನೆ ಮಾಡಿ. ಈ ಬಿಲ್‌ನ ಮೇಲೆ ವಿರೋಧ ಮಾಡಬೇಕಲ್ಲ ಎಂದು ವಿರೋಧ ಮಾಡುತ್ತಿಲ್ಲ. ನಾನು ಇರತಕ್ಕಂಥ ನಿಜ ಪರಿಸ್ಥಿತಿಯನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅದಕ್ಕೋಸ್ಕರವಾಗಿ ಈ ಬಿಲ್ಲನ್ನು ವಾಪಾಸ್ಸು ತೆಗೆದುಕೊಂಡು ಆ

ಮೀನುಗಾರರನ್ನು ಯಾವ ರೀತಿ ರಕ್ಷಣೆ ಮಾಡಬೇಕು ಒಂದು ವೇಳೆ ಮಿಸ್‌ಯೂಸ್ ಆದರೆ ಅವರು ಲೈಸನ್ಸ್ ತೆಗೆದುಕೊಳ್ಳಲು ಏನು ಮಾಡಬೇಕು ಇದರ ಬಗ್ಗೆ ತಾವು ಆಲೋಚನೆ ಮಾಡಬೇಕಾಗಿದೆ. ಇದು ಸಾಧ್ಯವಾಗದೇ ಇರುವಂಥದ್ದೇನಲ್ಲ. ಮತ್ತು ನಾನು ಈ ಬಿಲ್‌ನ ಮೇಲೆ ಎತ್ತಿರತಕ್ಕಂಥ ಎರಡು ಆಬ್ಜೆಕ್ಷನ್ಸ್ ಏನು ಇದೆ, they are valid objections. ಅದಕ್ಕ ನಿಮ್ಮ ಉತ್ತರ ಕೊಡಬೇಕು ಎಂದು ಹೇಳಿ ನಾನು ಈ ಬಿಲ್‌ನ್ನು ವಾಪಾಸ್ಸು ಪಡೆಯಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ಈ ಕರ್ನಾಟಕ, ಇನ್‌ಲ್ಯಾಂಡ್ ಫಿಷರೀಸ್ ಕನ್ಸರ್ವೇಶನ್ ಡೆವಲಪ್‌ಮೆಂಟ್ ಅಂಡ್ ರೆಗ್ಯುಲೇಷನ್ ಬಿಲ್ ಸದನದ ಮುಂದೆ ತಂದಿದ್ದಾರೆ. ಇದರ ಉದ್ದೇಶ ಏನೆಂದರೆ ಹೈದರಾಬಾದ್ ಕರ್ನಾಟಕದಲ್ಲಿ ಇರತಕ್ಕಂಥ 1356ನೇ Fasil ಆಕ್ಟ್, ಮದರಾಸು ಅಮೆಂಡ್‌ಮೆಂಟ್ ಆಕ್ಟ್ ಮತ್ತು ಮೈಸೂರು ಇವು ಮೂರನ್ನು ಒಂದರಲ್ಲಿಯೇ ಸೇರಿಸಿ ಬಿಲ್ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಸರ್ಕಾರದವರು ಈ ಬಿಲ್‌ನ್ನು ತಂದಿದ್ದಾರೆ. ಆದರೆ ಈಗಾಗಲೇ ಶ್ರೀಮಾನ್ ವೈ.ರಾಮಕೃಷ್ಣರವರು ಹೇಳಿದ ಹಾಗೆ ಚಾಪ್ಟರ್ 4ರಲ್ಲಿ ಸೆಕ್ಷನ್ 14, 15 ಮತ್ತು 16 ಈ ಮೂರು ಸೆಕ್ಷನ್‌ಗಳು ಆ ಹಳೆಯ ಕಾನೂನುಗಳಲ್ಲಿ ಇದ್ದವೋ ಹೇಗೆ? ಎಲ್ಲದಕ್ಕಿಂತಲೂ ವಿಚಿತ್ರ ಏನೆಂದರೆ ಈ ಫೈನಾನ್ಸಿಯಲ್ ಮೆಮರಾಂಡಮ್‌ನಲ್ಲಿ ಏನು ಹೇಳಿದ್ದಾರೆಂದರೆ "There is no extra financial implication involved in the proposed measure". ಆದರೆ ಕಾನೂನಿನ ಪ್ರಕಾರ ತಾವು ಈ ಆಕ್ಟ್‌ನಲ್ಲಿ ಇನ್‌ಲ್ಯಾಂಡ್ ಫಿಷರೀಸ್ ಅಡ್‌ವೈಸರಿ ಬೋರ್ಡ್ ಕಾನ್ಸ್‌ಟ್ಯೂಟ್ ಮಾಡುತ್ತೇವೆಂದು ಹೇಳಿದಿರಿ. ಇನ್‌ಲ್ಯಾಂಡ್ ಫಿಷರೀಸ್ ಅಡ್‌ವೈಸರಿ ಬೋರ್ಡನ್ನು ತಾವು ಕಾನ್ಸ್‌ಟ್ಯೂಟ್ ಮಾಡಿದರೆ ಇದರಲ್ಲಿ ಮಿನಿಸ್ಟರ್ ಇನ್‌ಚಾರ್ಜ್ ಚೇರ್‌ಮನ್, ಸೆಕ್ರಟರಿ ಇನ್‌ಚಾರ್ಜ್ ಫಿಶರೀಸ್, ಫೈನಾನ್ಸ್, ಇರಿಗೇಷನ್ಸ್, ರೂರಲ್ ಡೆವಲಪ್‌ಮೆಂಟ್, ಮಂಗಳೂರು ಡೈರೆಕ್ಟರ್ ಆಫ್ ಇನ್ಸ್‌ಟ್ರಕ್ಷನ್ಸ್, ಫಿಶರೀಸ್ ಕಾಲೇಜ್, ಡೈರೆಕ್ಟರ್ ಫಾರ್ ಫಿಶರೀಸ್, Two persons of whom one shall be a woman and one shall be a person belonging to the Scheduled Castes or Scheduled Tribes; two persons who are members of the Karnataka Legislature; Two persons of whom one shall be a person from the Fisheries Co-operative Societies ಅಂದರೆ ತಾವು 'ಎ' ಯಿಂದ 'ಜಿ' ವರೆಗೆ ಏನು ಸದಸ್ಯರನ್ನು ನೇಮಿಸುತ್ತಿದ್ದೀರಿ, ಇದರಲ್ಲಿ 4 ಅಥವಾ 5 ಜನ ಅಫಿಶಿಯಲ್ ಬಿಟ್ಟರೆ ಸುಮ್ಮಾರು 5 ಜನ ನಾನ್ ಅಫಿಶಿಯಲ್ಸ್ ಇದ್ದಾರೆ. ಅಂದರೆ 13 ಜನರಲ್ಲಿ 5 ಜನ ನಾನ್ ಅಫಿಶಿಯಲ್ಸ್ ಇದ್ದಾರೆ. ಎಂ.ಎಲ್.ಎ.ಗಳಿಗೆ ನೀವು ಮೀಟಿಂಗ್ ಕರೆದರೆ ಟಿ.ಎ. ಡಿ.ಎ. ಕೊಡಬೇಕಾಗುತ್ತದತ. ಈ ಟಿ.ಎ. ಮತ್ತು ಡಿ.ಎ.ಯನ್ನು ಯಾವುದರಿಂದ ಅವರಿಗೆ ಕೊಡುತ್ತೀರಿ? ಫೈನಾನ್ಸಿಯಲ್ ಇನ್‌ವಾಲ್ವ್‌ಮೆಂಟ್ ಇದರಲ್ಲಿ ಇಲ್ಲವೇ ಇಲ್ಲ ಎಂದು ಹೇಳುತ್ತಿದ್ದೀರಿ. ಯಾವುದೇ ಒಂದು ಮೀಟಿಂಗ್ ಕರೆದರೆ ಆ ಮೀಟಿಂಗ್ ಹಣ ಬೇಕು. ಇದನ್ನೆಲ್ಲಾ ಯೋಚನೆ ಮಾಡಿದರೆ ಫೈನಾನ್ಸಿಯಲ್ ಮೆಮರಾಂಡಮ್‌ನಲ್ಲಿ There is no extra financial implication involved in the proposed measure ಎಂದು ಹೇಳುತ್ತೀರಿ, ಅದೇ ನನಗೆ ಅರ್ಥ ಆಗುತ್ತಿಲ್ಲ. ಈ

ಜನರಿಗೆ ಟಿ.ಎ. ಮತ್ತು ಡಿ.ಎ. ಕೊಡಬೇಕು. ಸೆಕ್ರೇಟರಿಗಳು ಜರ್ನಿ ಮಾಡಬೇಕಾದರೆ, ಸ್ಪೆಸಿಫಿಕ್ ಆಗಿ ಇದೇ ಮೀಟಿಂಗ್‌ಗೆ ಕರೆದರೆ ಮಂಗಳೂರಿನಿಂದ ಬರತಕ್ಕಂಥ ಫಿಶರೀಸ್ ಡೈರೆಕ್ಟರ್, ಎಂ.ಎಲ್.ಎ.ಗಳನ್ನು ಇದಕ್ಕೆ ನಾಮಿನೇಟ್ ಮಾಡಿದರೆ ತಮ್ಮ ಮತಕ್ಷೇತ್ರದಿಂದ ಮೀಟಿಂಗ್ ನಡೆಯುವ ಸ್ಥಳಕ್ಕೆ ಬರಬೇಕಾದರೆ ಅವರಿಗೆ ಟಿ.ಎ. ಮತ್ತು ಡಿ.ಎ. ಇಲ್ಲದೆ ಮೀಟಿಂಗ್‌ಗಳನ್ನು ಮಾಡುತ್ತೀರಾ? ಅಥವಾ ಟಿ.ಎ. ಮತ್ತು ಡಿ.ಎ. ಕೊಟ್ಟ ಮೇಲೆ ಫೈನಾನ್ಸಿಯಲ್ ಮೆಮರಾಂಡಮ್‌ನಲ್ಲಿ ಅದನ್ನು ಏಕೆ ನಮೂದು ಮಾಡಲಿಲ್ಲ? With this lapse, I could not say that this is not a proper bill. Either you have to amend it or you have to withdraw it. ಫೈನಾನ್ಸಿಯಲ್ ಮೆಮರಾಂಡಮ್‌ಗೆ ನೋ ಎಕ್ಸ್‌ಪೆನ್ಸ್ ಫೈನಾನ್ಸಿಯಲ್ ಬರ್ಡನ್ ಎಂದು ಹೇಳಿಕೊಂಡು ಸುಮ್ಮನೆ ಬೇರೆಯುವದಕ್ಕೆ ಮಾಡಿದ ಹಾಗೆ ಇದಕ್ಕೂ ಚೀಟಿ ಮಾಡುವುದಕ್ಕೆ ಹೊರಟರೆ ಹೇಗೆ? 13 ಜನರ ಬೋರ್ಡ್ ಕಾನ್ಸ್‌ಟಿಟ್ಯೂಟ್ ಮಾಡಿದ್ದೀರಿ. ಮಂತ್ರಿಗಳು ಮತ್ತು ಸಕ್ರೇಟರಿಗಳು ಅದು ತಮ್ಮ ಕರ್ತವ್ಯ ಎಂದು ಹೋಗುತ್ತಾರೆಂದು ತಿಳಿದುಕೊಳ್ಳೋಣ. ಆದರೆ ಎಸ್.ಸಿ. ಮೆಂಬರ್ ಅಥವಾ ಒಬ್ಬ ಕೋ-ಆಪರೇಟಿವ್ ಮೆಂಬರ್, ಇಬ್ಬರು ಎಂ.ಎಲ್.ಎ.ಗಳು ಇವರೆಲ್ಲ ಮೀಟಿಂಗ್‌ಗಳಿಗೆ ಟಿ.ಎ. ಡಿ.ಎ. ಇಲ್ಲದೇ ಹೇಗೆ ಹೋಗುತ್ತಾರೆಯೇ? ಅವರಿಗೆ ಪುಕ್ಕಟೆಯಾಗಿ ಬಸ್ ಪಾಸ್ ಕೊಡುತ್ತೀರೋ? ಅಥವಾ ಫಿಷರೀಸ್ ಡಿಪಾರ್ಟ್‌ಮೆಂಟಿನ ಕಾರನ್ನು ತರಿಸಿಕೊಂಡರೆ ಅದಕ್ಕೂ ಪೆಟ್ರೋಲ್ ಖರ್ಚು ಬರುತ್ತದೆ. ಆದ್ದರಿಂದ ಇದು ಡಿಫಕ್ಟೀವ್ ಬಿಲ್ ಆಗಿರುತ್ತದೆ. ಇದಕ್ಕೆ ಕಾನೂನು ಇಲಾಖೆಯವರು ಏಕೆ ಅಡ್ವೈಸ್ ಮಾಡಿಲ್ಲವೋ ಗೊತ್ತಿಲ್ಲ. ಈ ರೀತಿಯಾದ ಬಿಲ್‌ನ್ನು ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇದನ್ನು ವಿತ್‌ಡ್ರಾ ಮಾಡಬೇಕಾಗುತ್ತದೆ. ನಾನು ಹೇಳಿದ ಪಾಯಿಂಟ್‌ಗಳನ್ನು ಸೆಟ್ಲ್ ಮಾಡಿದ ಮೇಲೆ ನಾನು ಮುಂದೆ ಮಾತನಾಡುತ್ತೇನೆ. ಏಕೆಂದರೆ ಈ ಬಿಲ್ ಪ್ರೊಫಾರ್ಮ ಪ್ರಕಾರ ಇಲ್ಲ. As per Rules of Procedure & Conduct of Business ಇದೂ ಸಹ ಇಲ್ಲ. ನೀವು ಒಂದು ವೇಳೆ ಈ ಬಿಲ್‌ನ್ನು ತಂದಿರುವುದು ಸರಿಯಿದೆಯೆಂದು ಸಮರ್ಥನೆ ಮಾಡಿಕೊಂಡರೆ, ಮುಂದೆ ನಾವು ಆ ಬಿಲ್‌ನ ಮೆರಿಟ್ ಮತ್ತು ಡಿಮೆರಿಟ್ ಮೇಲೆ ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದೆ. ಈ ಪಾಯಿಂಟ್ ಆಫ್ ಆರ್ಡರ್‌ಗೆ ತಾವು ಏನು ಉತ್ತರ ಕೊಡುತ್ತೀರೋ ಕೊಡಿ. ಏಕೆಂದರೆ ಪುಟ 18ರಲ್ಲಿ ಫೈನಾನ್ಸಿಯಲ್ ಮೆಮರಾಂಡಮ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. ಅದೇನೆಂದರೆ There is no extra financial implication involved in the proposed measure. As per your own Chapter III Page 6 Section 8(a) to (j) ಎ' ಯಿಂದ 'ಜೆ' ವರೆಗೆ ಕಾನ್ಸ್‌ಟಿಟ್ಯೂಟ್ ಆಗತಕ್ಕಂಥ ಎಲ್ಲಾ ಸದಸ್ಯರುಗಳಿಗೆ ಕೊಡಬೇಕಾಗುತ್ತದೆ. ಅದಕ್ಕಾಗಿ ಇದನ್ನು ಸ್ಪಷ್ಟಪಡಿಸಬೇಕು. ಮತ್ತು ಈ ಬಿಲ್ ಪ್ರಾಪರ್ ಫಾರ್ಮ್‌ನಲ್ಲಿ ಇಲ್ಲ. I am raising this point of order. Kindly enlighten as to how this Bill has been brought without mentioning the financial expenditure.

ಶ್ರೀ ಎಂ.ಪಿ.ನಾಣಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಗೆಳೆಯರಾಗಿರತಕ್ಕಂಥ ರಾಮಕೃಷ್ಣರವರು

ಮತ್ತು ಮಿತ್ರರಾಗಿರತಕ್ಕಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು 2 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದನೆಯದು ಏನೆಂದರೆ ಈ ಕಾನೂನು ಕೇಂದ್ರ ಸರ್ಕಾರದಲ್ಲಿ ಇದೆ. ಕೇಂದ್ರ ಸರ್ಕಾರದಲ್ಲಿ ಕಾನೂನು ಇದ್ದಾಗ ಆ ಕಾನೂನನ್ನು ಬದಲಾಯಿಸುವುದು ಹೇಗೆ? ಎಂದು. ನಮ್ಮ ಸ್ಟೇಟ್ ಲೆಜಿಸ್ಲೇಚರ್‌ಗೆ ಅನ್ವಯ ಆಗುತ್ತದೆಯೇ ಎನ್ನುವ ವಿಚಾರ. ತಮ್ಮ ಗಮನಕ್ಕೆ ತರುವುದೇನೆಂದರೆ 1956ನೇ ಇಸವಿಗಿಂತ ಮೊದಲೇ ಇವೆಲ್ಲ ಬಂದಂಥ ಕಾನೂನುಗಳು. 1956ನೇ ಇಸವಿ ಬಂದಮೇಲೂ ಕೂಡ ನಾವು ನಮ್ಮ ಕರ್ನಾಟಕ ರಾಜ್ಯಕ್ಕೆ ಸಮಗ್ರವಾಗಿರತಕ್ಕಂಥ ಒಳನಾಡು ಮೀನುಗಾರಿಕೆ ಕಾನೂನನ್ನು ತರಲಿಲ್ಲ. ನಾವು ತರತಕ್ಕಂಥದ್ದರಲ್ಲಿ 3 ಕಾನೂನುಗಳಿವೆ. ಒಂದನೆಯದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಕೆಲವು ಕಾನೂನುಗಳು, ಇದು ಕೆಲವು ಭಾಗದಲ್ಲಿ ಅನ್ವಯವಾಗುತ್ತದೆ. ಮದರಾಸು ಮೀನುಗಾರಿಕೆಗೆ ಸಂಬಂಧಪಟ್ಟಿರತಕ್ಕಂಥ ಕಾನೂನುಗಳು, ಇದು ಕೆಲವು ಭಾಗಗಳಿಗೆ ಅನ್ವಯವಾಗುತ್ತದೆ. ಮತ್ತು ಮೈಸೂರಿನ ಹಳೆಯ ಭಾಗದಲ್ಲಿ ಅಂದರೆ ಮೈಸೂರು ಮಹರಾಜರ ಕಾಲದಲ್ಲಿ ಇರತಕ್ಕಂಥದ್ದು, ಆ ಸಂದರ್ಭದಲ್ಲಿ ಹಂಟಿಂಗ್ ಅಂಡ್ ಫಿಶಿಂಗ್ ಎಂದು ಹೇಳುತ್ತಿರತಕ್ಕಂಥದ್ದು ಇತ್ತು. ಇದು 1901ರ ಕಾಲದಲ್ಲಿ ಇತ್ತು, ಈ ಕಾನೂನು ಮೈಸೂರು ಭಾಗಕ್ಕೆ ಅನ್ವಯವಾಗುತ್ತದೆ. ಹೈದರಾಬಾದಿನ ನಿಜಾಮರ ಕಾನೂನು 1300 ಇಸವಿಯಲ್ಲಿ ಇರತಕ್ಕಂಥದ್ದು, ಹೀಗೆ 4 ಕಾನೂನುಗಳು ಇದ್ದು, 4 ಭಾಗಗಳಲ್ಲಿ ಇವತ್ತಿಗೂ ಕೂಡ ಇವು ಚಾಲ್ತಿಯಲ್ಲಿ ಇವೆ.

SRI Y.RAMAKRISHNA:- Can we abate this Central Act?

SRI M.C.NANAIAH:- As far as fisheries are concerned, it is governed under Entry No.21 under the State list. It is entirely the prerogative of the Legislature to have any legislation in respect of Fisheries as far as the State is concerned. ಈಗ ನಾವು ಈ ಕಾನೂನನ್ನು ತರುವುದರ ಮುಖಾಂತರ 4 ಆಕ್ಟ್‌ಗಳನ್ನು ಇದರಲ್ಲಿಯೇ ಪ್ರಕಟಣೆ ಮಾಡುತ್ತಿದ್ದೇವೆ. Now we are are repealing four Acts including the Central Act. ಆದ್ದರಿಂದ ಈ ಒಂದು ಮಸೂದೆಯಾಗಿದೆ. ಈ ಮಸೂದೆಗೆ ನಾವು ಅಂಗೀಕಾರವನ್ನು ಕೊಟ್ಟಾದ ಮೇಲೆ we need have to send it to the President of India for his assent. President of India ಕ್ಕೆ ನಾವು ಈಗ ಹೋಗಲೇ ಬೇಕು. ಇದು ರಾಜ್ಯಪಾಲರ ಮುಖಾಂತರ ಮಾಡತಕ್ಕಂಥದ್ದು ಅಲ್ಲ Since we are repealing Central Act and other States Act, this Act will have to go to the President of India for his assent. ನಂತರ ಫೈನಾನ್ಸಿಯಲ್ ಎಕ್ಸ್‌ಪೆಂಡಿಚರ್ ಇದೆ ಆದ್ದರಿಂದ ಫೈನಾನ್ಸಿಯಲ್ ಮೆಮರಾಂಡಮ್‌ನಲ್ಲಿ ಖರ್ಚನ್ನು ನಿಭಾಯಿಸಲು ತೋರಿಸಿಲ್ಲ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದ್ದಾರೆ.

ಇದರಲ್ಲಿ ಅಡಿಷನಲ್ ಫೈನಾನ್ಸಿಯಲ್ ಎಕ್ಸ್‌ಪೆಂಡಿಚರ್ ಇಲ್ಲ. ಬಜೆಟ್ ಅಲಾಟ್‌ಮೆಂಟ್‌ನಲ್ಲಿ ಏನು ಹಣ ಇದೆ ಆ ಬಜೆಟ್ ಅಲಾಟ್‌ಮೆಂಟ್ ಒಳಗಡೆಯೇ ನಾವು ಖರ್ಚು ಮಾಡುತ್ತೇವೆ. We are not asking for additional financial expenditure at all. We are not asking for additional financial grant. Whatever amount that is earmarked for Fisheries Department, within that amount, we are going to operate. ನಾವು ಅಡಿಷನಲ್ ಎಕ್ಸ್‌ಪೆಂಡಿಚರ್ ಹಣ ಕೇಳಬೇಕಾಗಿರತಕ್ಕಂಥ ಸಂದರ್ಭ ಬಂದಾಗ, ದಯಮಾಡಿ ತಾವು ಕೇಳಬಹುದು. ಇನ್ನು ಬೋರ್ಡ್ ಕಾನ್ಸ್‌ಟ್ಯೂಟ್‌ಗೆ ಸಂಬಂಧಪಟ್ಟ ಹಾಗೆ ಅಲ್ಲಿಯ ಸದಸ್ಯರುಗಳಿಗೆ ಆಗುವಂಥ ಖರ್ಚು ಯಾವುದು ಇದೆ, ಅದು ಅಡಿಷನಲ್ ಎಕ್ಸ್‌ಪೆಂಡಿಚರ್ ಆಗುತ್ತದೆ ಆದ್ದರಿಂದ ಅಡಿಷನಲ್ ಎಕ್ಸ್‌ಪೆಂಡಿಚರ್‌ಗೆ ಫೈನಾನ್ಸಿಯಲ್ ಮೆಮರಾಂಡಮ್‌ನಲ್ಲಿ ತೋರಿಸಿಲ್ಲ ಎಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಹೆಚ್ಚುವರಿ ಖರ್ಚು ಎಂದು ಹೇಳತಕ್ಕಂಥದನ್ನು ನಾವು ಮಾಡುವುದಿಲ್ಲ. Within the budget earmarked for the Department ಆ ಮಂಡಳಿಗೆ ಕೊಡತಕ್ಕಂಥದ್ದನ್ನು ಕೂಡ ಅಳವಡಿಸಿಕೊಂಡು, ನಾವು ಈ ಬಿಲ್‌ನ್ನು ಮಾಡಿರುವುದರಿಂದ ಎಕ್ಸ್‌ಟ್ರಾ ಫೈನಾನ್ಸಿಯಲ್ ಎಕ್ಸ್‌ಪೆಂಡಿಚರ್ ಇಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸಭಾಧ್ಯಕ್ಷರೆ, ತಪ್ಪು ಆಗಿದ್ದನ್ನು ತಪ್ಪು ಎಂದು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಲಿ. ನಾವು ಹೇಳುವುದನ್ನು ಸ್ವಲ್ಪ ಕೇಳಿ. You yourself have said that this is an independent Act. Under this Act suppose any Member wants to perform his duty, naturally you have to give him TA, DA. ನಿಮ್ಮ ಬಿಲ್‌ನಲ್ಲಿ ಪುಟ 7ರಲ್ಲಿ ಸೆಕ್ಷನ್ 8 ಸಬ್ ಕ್ಲಾಸ್ 5ರಲ್ಲಿ ಏನು ಹೇಳಿದ್ದೀರಿ ಎಂದರೆ

"The members shall be entitled to receive such allowance

in respect of expenses incurred by them in the performance

of their duties as may be prescribed".

So, you are going to spend money on this. ಮುಂದೆ ಏನು ಹೇಳಿದ್ದಾರೆ ಎಂದರೆ, so as to encourage and establish a training institution, you have stated this. Where is the money for this? Whatever, even your budget is there, you could have mentioned it.....ಈ ಮೆಮೊರಾಂಡಮ್‌ನಲ್ಲಿ ಬರಲೇಬೇಕು, ಏಕೆಂದರೆ ಪ್ರತಿಯೊಂದು ಆ್ಯಕ್ಟ್ ಹಿಂದೆ ನಿಮ್ಮ ಬಿಸಿನೆಸ್ ಟ್ರಾನ್‌ಸಾಕ್ಷನ್ ರೂಲ್ಸ್ ಪ್ರಕಾರ, ಅಥವಾ ನಮ್ಮಲ್ಲಿರತಕ್ಕಂತಹ ಫೈನಾನ್ಸಿಯಲ್ ಮೆಮೊರಾಂಡಮ್ ಪ್ರಕಾರ ನೀವು ಅದನ್ನು ನಮೂದಿಸಲೇಬೇಕು. ಮೊನ್ನೆ ತಮ್ಮ ಸರ್ಕಾರದವರು

ಅರಮನೆಗೆ ಸಂಬಂಧಿಸಿದಂತೆ ಒಂದು ಬಿಲ್‌ನ್ನು ಸದನದ ಮುಂದೆ ಮಂಡಿಸಿದ್ದೀರಿ, ಅದರಲ್ಲಿ ಅಕ್ವಿಜಿಷನ್‌ಗೆ ಎಂದು 12 ಕೋಟಿ ರೂಪಾಯಿಗಳೆಂದು ನಮೂದಿಸಿದ್ದೀರಿ. ಹಾಗೆಯೇ ಇದಕ್ಕೆ ಹತ್ತು ಪೈಸೆ ಇರಲಿ, ಒಂದು ರೂಪಾಯಿ ಇರಲಿ, ಒಂದು ಕೋಟಿ ರೂಪಾಯಿಗಳು ಇರಲಿ, ಇದನ್ನು ಮೊದಲು ತಾವು ನಮೂದಿಸಬೇಕು. ಸುಮ್ಮನೆ ಇದ್ದಂತಹ ಬಜೆಟ್‌ನಲ್ಲಿಯೇ ಮಾಡಿಕೊಳ್ಳುತ್ತೇವೆ ಎಂದರೆ, ಅದರಲ್ಲಿಯು ಗೌರ್ನಮೆಂಟ್ ಬಜೆಟ್‌ನಲ್ಲಿಯೇ ಈ ಒಂದು ಆಕ್ಟ್ ಕೆಳಗಡೆ ಏನು ಖರ್ಚು ಬರುತ್ತದೆ ಅದನ್ನು ನಮೂದಿಸಬೇಕಾಗುತ್ತದೆ. That you are not telling anything..... ಸುಮ್ಮನೆ ಸಮರ್ಥನೆಯನ್ನು ಮಾಡಿಕೊಂಡರೆ ಆಗುವುದಿಲ್ಲ. ದಯವಿಟ್ಟು ಕ್ಷಮಿಸಿ.

ಶ್ರೀ ವೈ.ರಾಮಕೃಷ್ಣ:- ಮಾನ್ಯ ಅಧ್ಯಕ್ಷರೆ, ತಾವು ಇದೇ ಆಕ್ಟ್‌ನಲ್ಲಿಯೇ ಕ್ಲಾಸ್ (8)ನ್ನು ನೋಡಿ, Clause 8, empowers the State government to prescribe the allowances to the Members of the Advisory Board, Advisory Board ಈ ಆಕ್ಟ್‌ನಲ್ಲಿಯೇ ತಾನೇ ಇರುವುದು. You have to pay the amount from this Act, according to this Act ಅಂದ ಮೇಲೆ ತಾವು ಏನು ಹೇಳುತ್ತಿದ್ದೀರಿ. ಫಂಡ್‌ನಿಂದ ಕೊಡುತ್ತೇವೆ , ಸಾಮಾನ್ಯ ಆಯವ್ಯಯದಲ್ಲಿ ಕೊಡುತ್ತೇವೆ ಇದು ಈ ರೀತಿಯಾಗಿ ಆಗುವುದಿಲ್ಲ. It is an independent Act passed.... Advisory Board..... Advisory Boardಗೆ ಅಂದರೆ 8 ಕ್ಲಾಸ್‌ನ ಪ್ರಕಾರ ಟಿ.ಎ. ಮತ್ತು ಡಿ.ಎ. ಯನ್ನು ಕೊಡಬೇಕೆಂದು ಹೇಳಿದ್ದೀರಿ. ಈಗ ತಾವು ಉತ್ತರದಲ್ಲಿ ಏನು ಹೇಳುತ್ತಿದ್ದೀರಿ ಎಂದರೆ ನಾವು ಬೇರೆ ಹೆವನ್‌ನಿಂದ ಕೊಡುತ್ತೇವೆ ಆ ಆಕ್ಟ್‌ನ ಕೆಳಗೆ ಕೊಡುವುದಿಲ್ಲ ಎಂದು ಹೇಳುತ್ತಿದ್ದೀರಿ. Is it legally correct? ಇದನ್ನು ಒಪ್ಪಿಕೊಳ್ಳಿ, ತಪ್ಪು ಇದ್ದರೆ ತಿದ್ದುಕೊಂಡರೆ ಆಯಿತು.,

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೆ, ನಾವು ಈ ಒಂದು ಕಾನೂನನ್ನು ಜಾರಿಗೆ ತರಲು ಈ ಮಂಡಲಿಯನ್ನು ರಚನೆಯನ್ನು ಮಾಡಿದ ಮೇಲೆ ಈ ಒಂದು ಮಂಡಲಿಗೆ ರಚನೆಗೆ ಸಂಬಂಧಪಟ್ಟ ಹಾಗೆ ಆಗುತ್ತಿರುವಂತಹ ಖರ್ಚು ಯಾವುದು ಅಥವಾ ಅದಕ್ಕೆ ಸಂಬಂಧಪಟ್ಟಿರುವುದಕ್ಕೆ ಟ್ರೈನಿಂಗ್ ಕೊಡಲಿಕ್ಕೆ ಕೊಡಬೇಕಾದಂತಹ ಖರ್ಚು ಯಾವುದು ಇದೆ ಅದರಲ್ಲಿ ನಮ್ಮ ಇಲಾಖೆಗೆ ಕೊಟ್ಟಿರತಕ್ಕಂತಹ ಈ ಒಂದು ಅನುದಾನ ಏನಿದೆ ಅದಕ್ಕಿಂತ ಹೆಚ್ಚು ಖರ್ಚು ಮಾಡುವಂಥದ್ದು ಆದರೆ ನಾವು ಆ ಸಂದರ್ಭದಲ್ಲಿ ಫೈನಾನ್ಸಿಯಲ್ ಮೆಮೊರಾಂಡಮ್‌ಗೋಸ್ಕರವಾಗಿ ರಾಜ್ಯಪಾಲರ ಅನುಮೋದನೆಗಾಗಿ ಬರಲೇಬೇಕಾಗುತ್ತದೆ. ಜಾರಿಗೆ ತರುವಂತಹ ಸಂದರ್ಭದಲ್ಲಿ ಅಥವಾ ಪರಿಶೀಲನೆಗೋಸ್ಕರವಾಗಿ ತರಲೇಬೇಕು. For the purpose of introduction it is not necessary, it is only for the purpose of consideration, of course, I agree..... ಆದರೆ ಅಂತಹ ಒಂದು ಪರಿಸ್ಥಿತಿಯು ನಿರ್ಮಾಣವಾಗದೇ ಇರುವುದರಿಂದ ಈ ಒಂದು ಕಾನೂನ್ನಿನ ಅಡಿಯಲ್ಲಿ ನಾವು ನಿಯಮಗಳನ್ನು ರಚನೆಯನ್ನು ಮಾಡುತ್ತೇವೆ. ಈ ಒಂದು ಕಾನೂನಿನ ಅಡಿಯಲ್ಲಿ ಪ್ರತಿಯೊಂದು ನಿಯಮಗಳನ್ನು ರಚನೆಯನ್ನು ಮಾಡಬೇಕಾಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, I am telling it is neces-

sary. Every Bill..... according to Business transaction rules..... ಪ್ರಕಾರ ಇದು ಇದೆ. ತಾವು ಇಲ್ಲ ಎಂದರೆ ಹೇಳಿ.

SRI M.C.NANAIAH:- Sir, I think ಇದನ್ನು ತಂದಂತಹ ಸಂದರ್ಭದಲ್ಲಿ ಇದರ ಬಗ್ಗೆ ಯೋಚನೆಯನ್ನು ಮಾಡಿದ್ದೇವೆ. Since we are not incurring any expenditure as far as formation of Board is concerned, since as at the moment, as at the moment we are having Inland Fisheries, govern under 4 Acts..... ಈಗಲೂ ಕೂಡ ಆ ರೀತಿಯಲ್ಲಿ ನಡೆಯುತ್ತಿದೆ. ಆದರೆ ಅದಕ್ಕೆ ಸಪರೇಟ್ ಆಗಿರತಕ್ಕಂತಹ ಬೋರ್ಡ್ ಇಲ್ಲ. ಸರ್ಕಾರದ ವತಿಯಿಂದ ಇದನ್ನು ಮಾಡುತ್ತಿದ್ದೇವೆ. ಈಗ ಸರ್ಕಾರದವರು ಮಾಡುತ್ತಿರತಕ್ಕಂತಹ ಕೆಲಸ ಯಾವುದು ಇದೆ ಈ ಕೆಲಸಗಳನ್ನು ನಾವು ಬೋರ್ಡ್‌ನವರಿಗೆ ಹಸ್ತಾಂತರ ಮಾಡುವುದರಿಂದ ನಮ್ಮ ಇಲಾಖೆಗೆ ಕೊಟ್ಟಿರತಕ್ಕಂತಹ ಅನುದಾನ ಯಾವುದು ಇದೆ ಅನುದಾನದ ಒಂದು ಭಾಗವನ್ನು ಕ್ರೋಢೀಕರಿಸುತ್ತಿದ್ದೇವೆ. We are not incurring any extra expenditure. We are not asking for additional expenditure at all.....

Sri Y.Ramakrishna:- Sir, the Law Minister is the Chairman of the Scrutinising Committee and he is expected to scrutinise the bill in accordance with the Constitution and the rules of procedure, ನೀವು ಯಾವುದೇ ಬಿಲ್ಲನ್ನು ತೆಗೆದುಕೊಂಡು ಬನ್ನಿ ಅದರ ಬಗ್ಗೆ ನಾನು ಹೇಳುತ್ತೇನೆ, ನಾನು ಹೇಳುವುದು ವಿರೋಧ ಮಾಡಬೇಕೆಂದು ಅಲ್ಲ. ಇರತಕ್ಕಂತಹ ಲೋಪದೋಷಗಳನ್ನು ನೀವು ಆಗಿರತಕ್ಕಂತಹ ತಪ್ಪುಗಳನ್ನು ಆಗಿದೆ ಎಂದು ಒಪ್ಪಿಕೊಳ್ಳುವುದಕ್ಕೆ ಸಿದ್ಧ ಇಲ್ಲ ಎಂದ ಮೇಲೆ ನಿಮ್ಮ ತಪ್ಪುಗಳನ್ನು ವಿರೋಧ ಪಕ್ಷದವರಾದ ನಾವು ಒಪ್ಪಿಕೊಳ್ಳಲೇಬೇಕೇ? ಇದು ನನ್ನ ಪ್ರಶ್ನೆ ಇರತಕ್ಕಂಥದ್ದು. ಒಂದು ವೇಳೆಯಲ್ಲಿ ನಿಮ್ಮ ಆಫೀಸರ್ಸ್ ತಪ್ಪು ಮಾಡಿರಬಹುದು ಅಥವಾ ಮಿಸ್-ಗೈಡ್ ಮಾಡಿರಬಹುದು when you have not applied your mind ಸರಿಯಾಗಿ ನೋಡದೇ ಇರಬಹುದು, ಈಗ ನೋಡಿ ಸ್ವಾಮಿ ಎಂದರೆ, ಅದಕ್ಕೋಸ್ಕರವಾಗಿಯೇ ಇವತ್ತು ಸ್ಥಳೀಯ ಸಂಸ್ಥೆಗಳ ಬಿಲ್ ವಾಪಸ್ಸು ಬಂದಿದೆ. ನಾನು ಈ ಹಿಂದೆಯೇ ಭಾಷಣ ಮಾಡಿ ಹೇಳಿದ್ದೇನೆ ಸೆಕ್ಷನ್ 159 ಸರಿಯಾಗಿಲ್ಲ ದಯವಿಟ್ಟು ಅದನ್ನು ಅಮೆಂಡ್ ಮಾಡಿ ಎಂದು. ಈಗ ವಿಧಾನ ಪರಿಷತ್ತಿಗೆ ಹೋಯಿತು ಅಲ್ಲಿ ಅಮೆಂಡ್ ಮಾಡಿಕೊಂಡರು ಈಗ ಅಪ್ರೂವಲ್‌ಗೆ ಇಲ್ಲಿಗೆ ಬಂದಿದೆ. ನಾವು ಹೇಳಿದಂತಹ ಸಂದರ್ಭದಲ್ಲಿ ಇದನ್ನು ಪ್ರೆಸ್ಟೀಜ್ ಆಗಿ ತೆಗೆದುಕೊಳ್ಳಬಾರದು. ಕಾನೂನು ವಿಚಾರಗಳನ್ನು ನಿಯಮಗಳ ವಿಚಾರಗಳನ್ನು ಸಂವಿಧಾನದ ವಿಚಾರಗಳನ್ನು ದಯವಿಟ್ಟು ಏನಾದರೂ ತೊಂದರೆಗಳು ಇದ್ದರೆ ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು. Let us not commit an error....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಆವರ ಗಮನಕ್ಕೆ ತರುವುದು ಏನೆಂದರೆ ರೂಲ್ಸ್ 78 the Financial Memorandum to Bills and money

clauses in Bills.....

'A Bill involving expenditure shall be accompanied

by a financial memorandum which shall invite particular attention to the clauses involving expenditure and shall also give an estimate of the recurring and non-recurring expenditure involved in case the Bill is passed into law.

(2) Clauses or provisions in bills involving expenditure from public funds shall be printed in thick type or in italics Provided that where a clause in a Bill involving expenditure is not printed in thick type or in italics, the Speaker may permit the member incharge of the Bill to bring such clauses to the notice of the House. ಯಾವಾಗ ಸೆಕ್ಷನ್ 78ರಲ್ಲಿಯೇ ಪರ್ಟಿಕ್ಯೂಲರ್ ಬಿಲ್ ಕೆಳಗಡೆ.....

Mr. Speaker:- Please read out 78(1)(a)

Sri M.Mallikarjuna Kharge:- 78(1) A Bill involving expenditure shall be accompanied by a financial memorandum.

Mr. Speaker:- That the Hon'ble Minister for Law & Parliamentary Affairs says is since it does not involve any expenditure.....

Sri M.Mallikarjuna Kharge:- He says - further it says... 'which shall invite particular attention to the clauses involving expenditure and shall also give an estimate of recurring and non-recurring expenditure involved in case the Bill is passed into law.

This Bill we are going to pass into law. If it becomes a Law then 13 Members will become Members of the Board and naturally the Board has to pay TA & DA, recurring and non-recurring expenditure, and office. Sir, this is the point of order I have raised under rule 78. I want your ruling.

ಶ್ರೀ ಎಂ.ಸಿ.ನಾಣಯ್ಯ :- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕೆಲವರು ಆಬ್ಜೆಕ್ಷನ್ ಅನ್ನು ಎತ್ತಿದ್ದಾರೆ. ನಾವು ಹೇಳಿರತಕ್ಕಂತಹ ಸಮಜಾಯಿಸಿಗೆ ಅದು ಅವರಿಗೆ ಸರಿಯಾಗಲಿಲ್ಲ. Sir, I request the Hon'ble Speaker to withhold the consideration of the bill. Bill has already been introduced. Consideration part of the bill may be withdrawn.

MR. SPEAKER:- Bill has already been introduced.

SRI M.C.NANAIAH:- Introduction part is there.

MR. SPEAKER:- It is a welcome gesture..... I withhold the Bill.

• ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಯಾಗಿ ಬಂದಿರುವ 1996ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಸಿ.ನಾಣಯ್ಯ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ):- ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಯಾಗಿ ಬಂದಿರುವ 1996ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಲು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕರ್ನಾಟಕ ರಾಜ್ಯ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರವಾಗಿ ಅದು ವಿಧಾನ ಪರಿಷತ್ತಿಗೆ ಹೋದಾಗ, ವಿಧಾನ ಪರಿಷತ್ತಿನಲ್ಲಿ ವಿಧಿ 159 ಯಾವುದು ಇದೆ ಅದರ ಬಗ್ಗೆ ಒಂದು ವ್ಯಾಪಕವಾದಂತಹ ಚರ್ಚೆ ನಡೆಯಿತು. ಚರ್ಚೆಯ ನಂತರ ಮಾನ್ಯ ಮುಖ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುತ್ತಿರತಕ್ಕಂತಹ ಸಂದರ್ಭದಲ್ಲಿ ಅದಕ್ಕೆ ಅಂಗೀಕೃತವಾಗಿ ನಾವು ಒಂದು ತಿದ್ದುಪಡಿಯನ್ನು ತಂದು ಆ ವಿಧಿ 159 ಯಾವುದು ಇದೆ, ಅದನ್ನು ತೆಗೆದು ಹಾಕಬೇಕೆಂದು ಹೇಳುತ್ತಿರತಕ್ಕಂತಹ ತಿದ್ದುಪಡಿಯನ್ನು ಮಂಡಿಸಿ ಆದ ಮೇಲೆ ಇದನ್ನು ಸರ್ಕಾರ ಒಪ್ಪಿಕೊಂಡು ವಿಧಾನಪರಿಷತ್ ಅದನ್ನು ಅಂಗೀಕಾರ ಮಾಡಿ ಇದನ್ನು ಈಗ ವಿಧಾನ ಸಭೆಗೆ ಕಳುಹಿಸಿದ್ದಾರೆ. 159ಕ್ಕೆ ತಿದ್ದುಪಡಿಯನ್ನು ತಂದಿರುವುದನ್ನು ಈ ಸದನಕ್ಕೆ ತಿಳಿಸುತ್ತೇನೆ. ದಯವಿಟ್ಟು ಒಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ನಮ್ಮ ಸಂವಿಧಾನದ ಅಮೆಂಡ್‌ಮೆಂಟ್‌ನ 73 ಅಮೆಂಡ್‌ಮೆಂಟ್ ಯಾವುದು ಇದೆ. 73ನೇ ವಿಧಿಯಲ್ಲಿ 243 (ಸಬ್ ಕ್ಲಾಸ್ 3 ಸಿ ಅಂಡ್ ಡಿ ಇದು ನಮ್ಮ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ರಾಜ್ಯ ಸಭಾ ಮತ್ತು ಲೋಕಸಭಾ ಸದಸ್ಯರುಗಳು ಯಾರು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಸದಸ್ಯರಾಗಲು